ಅವತ್ತು ಶುಕ್ರವಾರ. ಸಮಾ ನೆನಪಿದೆ ಸೀತಾಲಕ್ಷ್ಮಿಗೆ. ಏಕೆಂದರೆ ಕಾಫಿ ಕುಡಿದು ಮುಗಿಸುತ್ತಿದ್ದಂತೆ ಎರೆದುಕೊಳ್ಳಲು ಕಮಲಾ ತಲೆಗೆ ಎಣ್ಣೆ ಹಾಕಿಕೊಂಡಿದ್ದಳು. ಆಶ್ಚರ್ಯ ಎನ್ನುವಂತೆ ತಾನೇ ಸ್ವತಃ ತಲೆಗೆ ಎಣ್ಣೆ ತಟ್ಟಿಕೊಳ್ಳುತ್ತಾ, ನೀಳ್ಗೂದಲಿಗೆ ಸವರಿಕೊಳ್ಳುತ್ತಿದ್ದಳು. 'ಹೇಳಿದ್ರೆ ನಾನು ಹಾಕ್ತಿರಲಿಲ್ವೇನೇ? ಇವತ್ತೇನು ಹೊಸಾ ವೇಷ? ಸೂರ್ಯ ಪಶ್ಚಿಮದಲ್ಲಿ ಹುಟ್ಟಿದಾನಾ?' ಕೇಳಿದ್ದರು ವೆಂಕಮ್ಮ.

'ನಿನ್ನ ಕೆಲಸ ನೀನು ನೋಡ್ಕಾ...' ಸಿಡುಕಿದ್ದಳು ಮಗಳು.

ಸೀತಾಲಕ್ಷ್ಮಿ ಮೈ ತೊಳೆದುಕೊಂಡು ಬಂದವಳು ತನ್ನ ಮರದ ಪೆಠಾರಿ ತೆಗೆದು ಬದಿಯ ಖಾನೆಯಲ್ಲಿ ಕಟ್ಟಿಟ್ಟಿದ್ದ ಪುಟ್ಟ ಗಂಟು ಬಿಚ್ಚಿದ್ದಳು. ಎಲ್ಲಾ ಐವತ್ತು ಪೈಸೆ, ಒಂದು, ಎರಡು ರೂಪಾಯಿಯ ನಾಣ್ಯಗಳು. ಊಟದ ಮನೆಗೆ ಹೋದಲ್ಲಿ ದಕ್ಷಿಣೆ ಕೊಟ್ಟ ದುಡ್ಡು. ಬಲಗೈಯನ್ನು ಉಣ್ಣುತ್ತಿದ್ದ ಅನ್ನದ ಮೇಲೆ ವಿರಮಿಸಲು ಬಿಟ್ಟು, ಎಡಗೈ ಮುಂದೆ ಮಾಡಿ ಅದನ್ನು ತೆಗೆದುಕೊಳ್ಳುವಾಗ ಒಂಥರಾ ಸಿಗ್ಗು, ಮುಜುಗರ. ಐವತ್ತು ಪೈಸೆಯ ಒಂದು ನಾಣ್ಯ ತೆಗೆದು ದೇವರಕೋಣೆಯಲ್ಲಿದ್ದ ಕಾಣಿಕೆ ಡಬ್ಬಿಗೆ ಹಾಕಿ ದೇವರಿಗೆ ಶ್ರದ್ಧಾಪೂರ್ವಕ ಕೈ ಮುಗಿದಿದ್ದಳು ಸೀತಾಲಕ್ಷ್ಮಿ. ಯಾವತ್ತೋ ಒಂದು ದಿನ ಕಾರಣಿಕ ಕ್ಷೇತ್ರಕ್ಕೆ ಯಾತ್ರೆ ಹೋದರೆ ಇಲ್ಲಿ ಸಂಗ್ರಹವಾಗಿರುತ್ತಿದ್ದ ದುಡ್ಡು ಅಲ್ಲಿ ಕಾಣಿಕೆಡಬ್ಬಿಗೆ. 'ತಪ್ಪಾಯ್ತು ದೇವ್ರೇ, ಸಾವಿರ ಸತಿ ತಪ್ಪಾಯ್ತು. ಇನ್ನ್ಯಾವತ್ತೂ ಇಂಥ ಕೆಟ್ಟ ಯೋಚನೆ ಮಾಡುವುದಿಲ್ಲ. ಕ್ಷಮಿಸು ನನ್ನ...' ಯಾವತ್ತಿಗಿಂತ ಹೆಚ್ಚಿನ ಸುತ್ತು ಹಾಕಿ ದೇವರಿಗೆ ಕೈ ಮುಗಿದು, ಬಗ್ಗಿ ನಮಸ್ಕಾರ ಮಾಡುವಾಗಲೂ ಬೇಗ ಏಳದೆ ತಪ್ಪೊಪ್ಪಿಗೆಯ ಯಾಚನೆ. ಒಳಗಿಂದ ಅತ್ತೆ ಕರೆದಿದ್ದರು.

(ಸಶೇಷ)

## ಪ್ರತಿಕ್ರಿಯೆ




### ಆಯುರ್ವೇದ ಪದ್ಧತಿಯ ಹಿರಿಮೆ

'ನ್ಯಾನ್ಸಿ ಮಸಾಜ್ ಪಾರ್ಲರ್' ಧಾರಾವಾಹಿ (ಹಿಂದಿ ಮೂಲ: ಅರ್ಚನಾ ಪೈನ್ಯೂಲಿ, ಕನ್ನಡಕ್ಕೆ: ಡಿ.ಎನ್. ಶ್ರೀನಾಥ್) ತುಂಬಾ ಚೆನ್ನಾಗಿ ಮೂಡಿಬಂತು. ಎಚ್.ಎಸ್. ಮೋನಪ್ಪ ಅವರ ಚಿತ್ರಗಳು ಧಾರಾವಾಹಿಗೆ ಮತ್ತಷ್ಟು ರಂಗು ತುಂಬಿದವು. ಕೇರಳದಿಂದ ಶುರುವಾಗುವ ಕಥೆ ಎಷ್ಟೊಂದು ದೇಶಗಳಲ್ಲಿ ಓಡಾಡಿಸಿತು. ಪ್ರಾದೇಶಿಕ ವರ್ಣನೆಯಂತೂ ಕಣ್ಣಿಗೆ ಕಟ್ಟುವಂತೆ ಇತ್ತು. ಹೆಣ್ಣಿನ ಮಾನಸಿಕ ತೊಳಲಾಟ, ವಾಸ್ತವತೆ ಎಲ್ಲದರ ಅಭಿವ್ಯಕ್ತಿ, ಕಡೆಗೆ ಭಾರತದ ಆಯುರ್ವೇದ ಪದ್ಧತಿಯ ಹಿರಿಮೆಯನ್ನು ಕೂಡಾ ಕಾದಂಬರಿ ಎತ್ತಿಹಿಡಿಯಿತು.

—ಸಿ.ಆರ್. ಚಂಪಾ

### ವಿದೇಶಕ್ಕೆ ಹೋದ ಅನುಭವ

ಧಾರಾವಾಹಿ ಬಹು ಆಕರ್ಷಕವಾಗಿ ಮೂಡಿಬಂತು. ಈ ಧಾರಾವಾಹಿ ಓದುವಾಗ ನಾವೂ ವಿದೇಶದಲ್ಲಿರುವ ಅನುಭವವಾಯಿತು. ನ್ಯಾನ್ಸಿಯವರು ಮೂರು ಮದುವೆಯಾದರೂ ದಾಂಪತ್ಯದ ಸುಖ ಸಿಗಲಿಲ್ಲ. ನಮ್ಮ ಹಳ್ಳಿಗಳಲ್ಲಿ ಕುಡಿದು ಬರುವ ಗಂಡಂದಿರು ನೀಡುವ ಕಿರುಕುಳ, ವಿದೇಶಿಯರು ನೀಡುತ್ತಾರೆಂಬುದು ಈ ಧಾರಾವಾಹಿಯಿಂದ ತಿಳಿಯಿತು. ವಿದೇಶದವರ ಬದುಕಿನ ಚಿತ್ರಣ ತೋರಿಸಿದ್ದಕ್ಕೆ ಸಂತೋಷವಾಯಿತು.

—ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

### ವಿಫಲ ದಾಂಪತ್ಯದ ಮೆರವಣಿಗೆ

ಧಾರಾವಾಹಿ ವಿಫಲ ದಾಂಪತ್ಯದ ಮೆರವಣಿಗೆಯಂತಿತ್ತು. ಓದುಗರಿಗಾದ ಲಾಭ ಎಂದರೆ ವಿವಿಧ ದೇಶಗಳ ನಡೆನುಡಿ, ಸಂಸ್ಕೃತಿ ತಿಳಿದದ್ದು. ಬಾಡಿ ಮಸಾಜ್‌ನ ವಿವಿಧ ಪ್ರಕಾರಗಳ ವರ್ಣನೆ, ಕೊನೆಯಲ್ಲಿ ಯಾವುದು ಆಗಬಾರದೆಂದು ತಿಳಿದಿದ್ದೆನೊ ಹಾಗೇ ಆಯಿತು.

—ಬಿಲ್ಲೇಶ್ವರ, ಅಚ್ಚು, ಹುಂಚ

### ಬೇರೆ ದೇಶಗಳ ವಿವರಣೆ

ಧಾರಾವಾಹಿಯಲ್ಲಿ ಬೇರೆ ಬೇರೆ ದೇಶಗಳ ಬಗೆಗಿನ ವಿವರಣೆಗಳು ಬಹಳ ಚೆನ್ನಾಗಿವೆ. ಆದರೆ ಪ್ರತಿ ಗಂಡನಲ್ಲಿಯೂ ಒಂದೊಂದು ದೋಷ ಹುಡುಕಿ ವಿಚ್ಛೇದನ ಪಡೆದವಳಿಗೆ ನಾಲ್ಕನೆಯ ಗಂಡ ಊರ್ಜಿತ ಆಗುವನೇ?

—ಶೈಲಾ ಜೋಶಿ

### ಮನಸ್ಸಿಗೆ ನಾಟಿದ ಕಥನ

ಇಪ್ಪತ್ತೆರಡು ಕಂತುಗಳ ಧಾರಾವಾಹಿ ಮುಗಿದೇ ಹೋಯಿತಲ್ಲ ಅನ್ನಿಸುವಷ್ಟರ ಮಟ್ಟಿಗೆ ಕುತೂಹಲಭರಿತ. ಇದು ಒಂದು ಅನುವಾದಿತ ಕಥೆ ಎಂದು ಎಲ್ಲೂ ಅನ್ನಿಸಲೇ ಇಲ್ಲ. ಲೇಖಕರಾದ ಶ್ರೀನಾಥ್ ಅವರ ಅನುವಾದ ಅಷ್ಟು ಚೆನ್ನಾಗಿದೆ.

ಕೇರಳದ ಮಲಪ್ಪುರಂನಿಂದ ಆಫ್ರಿಕಾ, ಅಮೆರಿಕ, ಡೆನ್ಮಾರ್ಕ್, ಸೌದಿ ಅರೇಬಿಯ... ಈ ಎಲ್ಲಾ ದೇಶಗಳ ಭೌಗೋಳಿಕ ವಿವರ, ಸಾಂಸ್ಕೃತಿಕ ಕಟ್ಟುಪಾಡುಗಳು, ನಾಗರಿಕತೆ, ಎಲ್ಲವನ್ನು ಎಲ್ಲೂ ಏಕತಾನತೆ ಮೂಡದ ರೀತಿ ಎಳೆ ಎಳೆಯಾಗಿ ಓದುಗರ ಮನಸ್ಸಿನಲ್ಲಿ ನಾಟುವ ಹಾಗೆ ಬರೆದಿದ್ದಾರೆ. ಈ ಕಥಾನಾಯಕಿಯ ಬದುಕು, ಅಂತರಾಳ, ತುಮುಲ, ತಾಕಲಾಟ, ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಆಕೆ ಅನುಭವಿಸುವ ಕಷ್ಟ ಮನಮುಟ್ಟುವಂತೆ ಮೂಡಿಬಂದಿದೆ.

—ಶಾಂತ ಕುಮಾರ್, ಸರ್ಜಾಪುರ,
ವೇದಾವತಿ ಕೆ.ಇ.

### ಮೋನಪ್ಪನವರ ಕಲೆ ಅದ್ಭುತ

ಕಥಾನಾಯಕಿಯ ಶೋಚನೀಯ ಬದುಕು ಸುಖಾಂತ್ಯವಾಗಿದ್ದು ಅವಳ ಹೋರಾಟಕ್ಕೆ ಸಿಕ್ಕ ಪ್ರತಿಫಲ. ಆಯುರ್ವೇದ ಮಸಾಜ್ ಪ್ರಕ್ರಿಯೆಯನ್ನು ತುಂಬಾ ಚೆನ್ನಾಗಿ ವಿವರಿಸಿದ್ದಾರೆ. ಮೋನಪ್ಪನವರ ಕಲೆ ಅದ್ಭುತ.

—ಭಾರತೀ ಗಂಗಾಧರ್, ಬೆಂಗಳೂರು

### ಹೆಣ್ಣಿನ ಅಂತಃಶಕ್ತಿಯ ಸಮರ್ಥ ಚಿತ್ರಣ

ಧಾರಾವಾಹಿ ತುಂಬಾ ಚೆನ್ನಾಗಿ ಮೂಡಿಬಂದಿದೆ. ಒಬ್ಬ ಹೆಣ್ಣು, ಗಂಡನಾದವನು ಎಷ್ಟೆಲ್ಲಾ ಕಷ್ಟಗಳನ್ನು ಕೊಟ್ಟರೂ ಅವುಗಳನ್ನು ಧೈರ್ಯದಿಂದ ಎದುರಿಸಿ ಬದುಕುವ ರೀತಿ ಮತ್ತು ತೀರ ಕಷ್ಟವಾದಾಗ ಅವನಿಂದ ವಿಮುಕ್ತಿ ಹೊಂದಿ ಹೊಸದಾಗಿ ಬದುಕುವುದನ್ನು ತುಂಬಾ ಚೆನ್ನಾಗಿ ಬರೆದಿದ್ದಾರೆ. ಇಂದಿನ ಜೀವನದ ಒತ್ತಡಗಳಿಂದ ಹೊರಬರಲು ಮಸಾಜ್ ಒಂದು ಉಪಯುಕ್ತ ಪರಿಹಾರವೆಂಬುದನ್ನು ತಿಳಿಸಿರುತ್ತಾರೆ.

—ಪಿ.ಹೆಚ್. ಪಾಟೀಲ್, ರಾಣೆಬೆನ್ನೂರು

### ಇದು ಭಾರತದಲ್ಲಿ ನಡೆಯಲಾಗದ ಕಥೆ

ಧಾರಾವಾಹಿಯು ಓದುಗರಿಗೆ ಏನು ಹೇಳಲು ಹೊರಟಿದೆ ಎಂದು ತಿಳಿಯಲಿಲ್ಲ. ಒಬ್ಬ ಮಹಿಳೆ ಸ್ವಾವಲಂಬಿಯಾಗಿ ಮಸಾಜ್ ಪಾರ್ಲರ್ ನಡೆಸಿ ಜೀವನ ನಡೆಸುವುದನ್ನು ಅಭಿನಂದಿಸಬಹುದಾದರೂ, ಜೀವನದಲ್ಲಿ ಗಂಡಸರನ್ನು ಬಟ್ಟೆ ಬದಲಿಸುವ ಹಾಗೆ ಬದಲಿಸಿದ್ದು ಅಷ್ಟು ಸರಿಯೆನಿಸಲಿಲ್ಲ.

ಮೊದಲ ಗಂಡ ಪಾದ್ರಿಯಾಗಿಯೂ ಚರ್ಚಿಗೆ ಬರುವ ಅನೇಕ ಹೆಂಗಸರೊಂದಿಗೆ ಲೈಂಗಿಕ ಸಂಬಂಧ ಇಟ್ಟುಕೊಂಡಿದ್ದನ್ನು ವಿರೋಧಿಸಿದ ಅವಳು ಮಾಡಿದ್ದೇನು? ಮೊದಲ ಗಂಡನ ಕೆಟ್ಟ ಚಾಳಿಯನ್ನು ಸಹಿಸಲಾಗದೆ ಅವನನ್ನು ಬಿಟ್ಟಿದ್ದು ಸರಿಯೇ. ಎರಡನೇ ಮದುವೆಯಾದದ್ದೂ ಸರಿ ಎನ್ನಬಹುದು.

ಆದರೆ ಅವನು ಸರಿ ಇಲ್ಲವೆಂದು ಮತ್ತೊಬ್ಬನನ್ನು ಮದುವೆಯಾಗಿ ಮಗನನ್ನು ಪಡೆದು ಅವನೂ ಕ್ರೂರಿ ಎಂದು ವಿಚ್ಛೇದನ ಕೊಟ್ಟ ಮೇಲಾದರೂ ಸುಮ್ಮನಿರದೆ ತನ್ನ ಇಡೀ ಜೀವನವನ್ನು ಪಾರ್ಲರಿಗೆ ಬಂದ ಗ್ರಾಹಕ ಪಾಲ್‌ನಿಗೆ ಹೇಳಿ ಕೊನೆಗೆ ಅವನ ಜೊತೆಗೂ ಸಂಬಂಧ ಬೆಳೆಸಿ ಮದುವೆಯಾಗಿ ತನ್ನ 50ನೇ ವಯಸ್ಸಿನಲ್ಲಿ ಮಗು ಪಡೆಯುತ್ತಾಳೆ. ಭಾರತೀಯ ಸಮಾಜದಲ್ಲಿ ನಡೆಯಲಾಗದ ಕಥೆ ಇದು ಎಂದು ಹೇಳಬಹುದು.

—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

ಧಾರಾವಾಹಿ ಚೆನ್ನಾಗಿತ್ತು. ಬಹುಶಃ ಇಷ್ಟೊಂದು ಮದುವೆಯಾಗುವ ಅವಕಾಶ ವಿದೇಶಗಳಲ್ಲಿ ಮಾತ್ರ ಸಾಧ್ಯ ಅನಿಸುತ್ತದೆ.

—ಉಷಾ ಸೋಗಲ್, ತುರಹಳ್ಳಿ